

"ಯಾಕೊ ಕಳಕಪ್ಪ ತಡಾ ಆತಲ್ಲ?" ಎಂದು ಫಕೀರಪ್ಪ ಕೇಳಿದ.

"ಹಾಲು ಹಿಂಡೋದು ಸ್ವಲ್ಪ ತಡಾ ಆತು. ಅವರ ಮನಿಗೆ ಮಂದಿ ಬಂದಾರ. ಹಿಂಗಾಗಿ ಹಾಲು ಸ್ವಲ್ಪ ಜಾಸ್ತಿ ಬೇಕಾಗಿತ್ತು."

"ಆಗಲಿ, ನಾ ಹೋಕ್ಕೇನಿ. ನೀನು ಆಮ್ಯಾಗ ಬಾ" ಎಂದು ಫಕೀರಪ್ಪ ಹೇಳಿ ಹೊರಟ. ಇವರಿಬ್ಬರಿಗೂ ತಮ್ಮ ವಯಸ್ಸೆಷ್ಟೆಂದು ಸರಿಯಾಗಿ ಗೊತ್ತಿಲ್ಲ. ಅರವತ್ತೈದನ್ನು ಮೀರಿದವರೆಂದು ಹಳ್ಳಿಯ ಸಾಲಿ ಮಾಸ್ತರರು ಹೇಳಿದ್ದನ್ನು ಯಾವಾಗಲೊ ಕೇಳಿಸಿಕೊಂಡಿದ್ದ ಇಬ್ಬರೂ ಅದನ್ನೇ ಗಟ್ಟಿಯಾಗಿ ನಂಬಿದ್ದರು.

ಬಸವಣ್ಣೆಪ್ಪ ದೇಸಾಯರು ಊರು ಬಿಡುವ ಮುಂಚೆ ಅವರಿಗೂ ಇಷ್ಟೇ ವಯಸ್ಸಾಗಿರಬಹುದು. ದೇಸಾಯರ ಮನೆಯ ಹೊರಗಿನ ಬಂಕಣವೇ ಫಕೀರನ ಮನೆ. ಅವನು ಹುಟ್ಟಿದಾಗ ಅವರಪ್ಪ ಊರಲ್ಲಿ ಇರಲಿಲ್ಲವಂತೆ. ಗೋವಾಕ್ಕೆ ಕೆಲಸಕ್ಕೆಂದು ಹೋದವನು ಬರಲೇ ಇಲ್ಲವಂತೆ. ಫಕೀರನ ಜನನದ ಮೂರು ತಿಂಗಳ ನಂತರ ಅದೆಂಥದೊ ನಂಜು ಏರಿ ಅವಳೂ ಮರಣ ಹೊಂದಿದಳಂತೆ. ದೇಸಾಯರ ಮನೆಯವರೆ ಕೂಸಿನ ಲಾಲನೆ ಪಾಲನೆ ಮಾಡಿ ಬೆಳೆಸಿದರು. ಚೋಟುದ್ದ ಹುಡುಗ ದೇಸಾಯರ ಮನೆಯ ಕೆಲಸ ಮಾಡುವಂತಾದ ಮೇಲೆ ಅವನು ದನ ಕರುಗಳನ್ನು ಕಟ್ಟುವ ಕೊಟ್ಟಿಗೆಯನ್ನೇ ತನ್ನ ಮನೆ ಮಾಡಿಕೊಂಡ. ದೇಸಾಯರ ಮಕ್ಕಳೂ ಅವನೊಡನೆ ದೊಡ್ಡವರಾದರು. ಊರಿನ ಚಿಕ್ಕ ಗುಡ್ಡದ ಆಚೆ ಆಗ ಸರ್ಕಾರಿ ಪ್ರಾಥಮಿಕ ಶಾಲೆ ಬಂದಿತ್ತು. ಹುಡುಗರು ದೊಡ್ಡವರಾಗಿ ಶಾಲೆಗೆ ಹೋಗಲು ಪ್ರಾರಂಭಿಸಿದ ಮೇಲೆ ಫಕೀರ ದನ ಕರುಗಳನ್ನು ಮೇಯಿಸಲು ಗುಡ್ಡಕ್ಕೆ ಹೋಗುವಾಗ ಈ ಹುಡುಗರ ಜೊತೆ ಹೋಗಬೇಕು, ಸಂಜೆ ಅವರೊಡನೆಯೇ ದನ ಕರುಗಳನ್ನು ಹೊಡೆದುಕೊಂಡು ಮನೆಗೆ ಬರಬೇಕು. ದೇಸಾಯರ ದೊಡ್ಡ ಸಂಸಾರದಲ್ಲಿ ಮತ್ತೆ ಮತ್ತೆ ಚಿಕ್ಕವರು ಬಂದರು. ಅವರೂ ಶಾಲೆಗೆ ಹೋದರು. ಫಕೀರ ಅವರೊಡನೆ ಹೋಗುವುದು ಬರುವುದು ನಡೆದಿರುವಾಗಲೇ ಮಾಧ್ಯಮಿಕ ಶಾಲೆಯೂ ಬಂತು. ಹಿತ್ತಲಲ್ಲಿದ್ದ ಬಾವಿಯಿಂದ ನೀರು ಸೇದಿ ಕೊಡಗಳಿಂದ ಹಂಡೆ ತುಂಬಿಸಬೇಕು. ಎರಡು ಹೊತ್ತು ಹೊಟ್ಟೆ ತುಂಬ ಊಟವಿತ್ತು. ಮನೆಯ ಮಕ್ಕಳಿಗೆಲ್ಲ ಮರ ಹತ್ತುವುದು, ಗಿಡ ಮಂಗನ ಆಟ ಆಡುವುದನ್ನು, ಚಿಣಿ ಫಣಿ ಮುಂತಾದ ಅನೇಕ ಆಟಗಳನ್ನು ಆಡುವುದನ್ನು ಕಲಿಸಿದವನೇ ಫಕೀರ. ಅವನಿಗೆ ತನ್ನ ತಂದೆ ತಾಯಿಗಳ ಪೂರ್ವಾಪರಗಳನ್ನು ಯೋಚಿಸಲು ಈ ಎಲ್ಲ ಹುಡುಗರ ಮಧ್ಯೆ ಮತ್ತು ತನ್ನ ಬಿಡುವಿಲ್ಲದ ಕೆಲಸಗಳ ಜೊತೆ ಸಮಯವೇ ಸಿಗಲಿಲ್ಲ.

ದೇಸಾಯರ ಮಕ್ಕಳೆಲ್ಲ ಹೆಚ್ಚಿನ ವಿದ್ಯಾಭ್ಯಾಸಕ್ಕೆ ದೊಡ್ಡ ದೊಡ್ಡ ಊರುಗಳಿಗೆ ಹಾರಿದರು. ರಜೆಯಲ್ಲಿ ಬಂದಾಗ ಫಕೀರನೊಡನೆ ಮೊದಲಿನ ಸಖ್ಯದೊಡನೆಯೇ ಮಾತನಾಡುತ್ತಿದ್ದರು. ಅವರು ತಂದ ಹೊಸಬಟ್ಟೆ ಧರಿಸಿ ಹಳ್ಳಿಯಲ್ಲೆಲ್ಲ ಹೇಳಿಕೊಳ್ಳುತ್ತ ಫಕೀರ ಓಡಾಡುತ್ತಿದ್ದ. ಬರುಬರುತ್ತ ಅವರ ಬರುವಿಕೆ ಕಡಿಮೆಯಾಯಿತು. ದೇಸಾಯರ ಹಿರಿಯ ಮಗ ಸುರೇಶನೊಡನೆ ಫಕೀರಪ್ಪನ ಒಡನಾಟ